**International Journal of Academic Research**
**ISSN: 2348-7666; Vol.3, Issue-3(2), March, 2016**
**Impact Factor: 3.075; Email: drtvramana@yahoo.co.in**

# ಸಮಾಜದ ವಿಕಾಸದಲ್ಲಿ ಸಿದ್ಧಗಂಗಾ ಮಠದ ಪಾತ್ರ –ಒಂದು ವಿಶೇಷ ಅಧ್ಯಯನ

ಶ್ರೀನಿವಾಸ ರಾವ್ ಎಸ್
ಸಂಶೋಧನಾವಿದ್ಯಾರ್ಥಿ.
ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ,
ಕುವೆಂಪು ವಿ.ವಿ. ಜ್ಞಾನ ಸಹ್ಯಾದ್ರಿ, ಶಂಕರ ಘಟ್ಟ.

ಪ್ರಪಂಚದ ಸಂಸ್ಕೃತಿಗಳಲ್ಲಿ ಭಾರತಿಯ ಸಂಸ್ಕೃತಿಯು ವಿಶೇಷವಾದುದಾಗಿದೆ. ಪ್ರಪಂಚದ ಪುರಾತನ ನಾಗರೀಕತೆಗಳಲ್ಲಿ ಒಂದಾದ ಭಾರತದ ಸಂಸ್ಕೃತಿಯನ್ನು ನಾಗರೀಕತೆಗಳ ತೊಟ್ಟಿಲು ಎಂದು ಕರೆಯುತ್ತಾರೆ. ಇಲ್ಲಿಯ ಕಲೆ, ಶಿಲ್ಪ, ಭಾಷೆ, ವೇಷ, ಆಹಾರ, ವಿಹಾರ, ವ್ಯವಹಾರಗಳಲ್ಲಿ ವೈವಿಧ್ಯತೆ ಕಂಡು ಬಂದರೂ, ಇವೆಲ್ಲಾ ಒಂದೇ ಹಾರದ ವಿವಿಧ ಪುಷ್ಪಗಳಂತೆ ಈ ಸಂಸ್ಕೃತಿಗೆ ಶೋಭೆಯನ್ನು ನೀಡುತ್ತಿವೆ. ಇಲ್ಲಿನ ಮಠಗಳು ಈ ಹಾರದ ರತ್ನಗಳಂತೆ ತಮ್ಮ ಕಾಂತಿಯಿಂದ ವಿಶ್ವಕ್ಕೆ ಬೆಳಕನ್ನು ನೀಡುತ್ತಿವೆ. ಈ ದೇಶದ ಮೇಲೆ ಶಕರು, ಹೂಣರು, ಗ್ರೀಕರು, ತುರುಕರು, ಅರಬರು, ಪೋರ್ಚುಗೀಸರು, ಡಚ್ಚರು, ಇಂಗ್ಲೀಷರು, ಫ್ರೆಂಚರು ದಾಳಿ ನಡೆಸಿ ಆಡಳಿತದ ಚುಕ್ಕಾಣಿಯನ್ನು ಹಿಡಿದರೂ, ಇಲ್ಲಿನ ಮಣ್ಣಿನ ವಾಸನೆಯನ್ನು ಉಳಿಸುವಲ್ಲಿ ಮಠಗಳ ಪಾತ್ರ ಮಹತ್ವದ್ದಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸ್ವೀಕರಿಸಿದ ಸಿದ್ಧಗಂಗಾ ಮಠವು ಅನ್ನ–ಅಕ್ಷರ–ಜ್ಞಾನ ದಾಸೋಹವನ್ನು ಹದಿಮೂರನೇ ಶತಮಾನದಿಂದ ನಡೆಸುತ್ತಾ ಬಂದಿದ್ದು ಈಗ 9000 ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದೆ. ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಪದವಿಯವೆಗೆ, ಕಲೆ, ವಾಣಿಜ್ಯ, ವಿಜ್ಞಾನ, ತಂತ್ರಜ್ಞಾನ, ವ್ಯದ್ಯಕೀಯ ಕ್ಷೇತ್ರಗಳಷ್ಟೇ ಅಲ್ಲದೆ ಆರ್ಷವಿದ್ಯೆಯನ್ನು ನೀಡುತ್ತಿದೆ. 132 ಸಂಸ್ಥೆಗಳ ಮೂಲಕ 45,000 ವಿದ್ಯಾರ್ಥಿಗಳಿಗೆ ಲೌಖಿಕ ವಿಷಯಗಳ ಜೊತೆಜೊತೆಗೆ ಆಧ್ಯಾತ್ಮಿಕ ವಿಷಯಗಳಿಗೂ ಮಹತ್ವ ನೀಡಿರುವದನ್ನು ಈ ಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

ಭಾರತೀಯ ವಾಙ್ಮಯವನ್ನು ಕಲಿಸಲು ಭಾರತೀಯರು ತಮ್ಮದೇ ಆದ ವಿಶೇಷ ಪದ್ಧತಿ ಹೊಂದಿದ್ದರು. ಅದೇ ಗುರು–ಶಿಷ್ಯ ಪರಂಪರೆ. ಎಲ್ಲಿಯವರೆಗೆ ಈ ಪದ್ಧತಿ ಭಾರತದಲ್ಲಿತ್ತೋ ಅಲ್ಲಿಯವರೆಗೆ ಇದು ವಿಶ್ವಗುರುವಿನ ಸ್ಥಾನದಲ್ಲಿತ್ತು. ವಿದೇಶಿ ಆಕ್ರಮಣದಿಂದ ಈ ಪದ್ಧತಿ ಕ್ರಮೇಣವಿನಾಶದಂಚಿಗೆ ತಲುಪಿತ್ತು. ಗುರುಪೀಠಗಳು ಎಚ್ಚೆತ್ತಕಾರಣ ಈಗ ಅಲ್ಪ–ಸ್ವಲ್ಪ ಉಳಿದಿವೆ. ಆಚಾರ್ಯ ಶಂಕರರು ದೇಶದ ನಾಲ್ಕೂ ದಿಕ್ಕಿನಲ್ಲಿ ಮಠಗಳನ್ನು ಸ್ಥಾಪಿಸಿ ನಾಲ್ಕುವೇದಗಳ ಜ್ಞಾನವನ್ನು ಉಳಿಸಿದರೆ, ಮಧ್ವಾಚಾರ್ಯರು ತಮ್ಮ ಭಾಷ್ಯದಮೂಲಕ ಈ ಜ್ಞಾನಕ್ಕೆ ವಿಶೇಷ ಸ್ಥಾನ ಕಲ್ಪಿಸಿದರು. ಶ್ರೀ ರಾಮಾನುಜಾಚಾರ್ಯರು ಸಮಾಜದ ಕಟ್ಟಕಡೆಗೂ ಇದನ್ನು ತಲುಪಿಸುವ ವ್ಯವಸ್ಥೆಮಾಡಿದರು. ಶ್ರೀರೇಣುಕಾಚಾರ್ಯರು, ಶ್ರೀಮರುಳಾರಾಧ್ಯರು, ಶ್ರೀ ಏಕೋರಾಮಾಧ್ಯರು, ಶ್ರೀ ಪಂಡಿತಾರಾಧ್ಯರು ಮತ್ತು ಶ್ರೀ ವಿಶ್ವಾರಾಧ್ಯರು ಪಂಚಪೀಠಗಳ ಮೂಲಕ ಜ್ಞಾನದಾಹಿಗಳಿಗೆ ತಮ್ಮ ತತ್ವ ಸಿದ್ಧಾಂತಗಳ ಮೂಲಕ ತಣಿಸಿದರೆ, ಬಸವಾದಿ ಶರಣರು ಜನಸಾಮಾನ್ಯರ ಭಾಷೆಯಲ್ಲಿ ವಚನಗಳನ್ನು ರಚಿಸಿ ಅನುಭವ ಮಂಟಪದಲ್ಲಿ ಭಕ್ತರಿಗೆ ಇದರ ಸುಧೆಯನ್ನು ಪಾನಮಾಡಿಸಿದರು. ಇದೇ

ಪರಂಪರೆಯಲ್ಲಿ ಬಂದ ಶ್ರೀ ಗೋಸಲ ಸಿದ್ಧೇಶ್ವರ ಸ್ವಾಮೀಜಿಯವರಿಂದ ಸಿದ್ಧಗಂಗಾ ಮಠವು 13ನೇ ಶತಮಾನದಲ್ಲಿ ಪ್ರಾರಂಭಿಸಿದರು. ಹಿಂದೆ ಇಲ್ಲಿ ಸಿದ್ಧರು ವಾಸಿಸುತ್ತಿದ್ದರಿಂದ ಈ ಸ್ಥಳಕ್ಕೆ ಸಿದ್ಧಗಂಗಾ ಎಂಬ ಹೆಸರು ಬಂದಿದೆ.

ಈ ಅಧ್ಯಯನದ ಪ್ರಾಥಮಿಕ ಮಾಹಿತಿಯನ್ನು ಸಿದ್ಧಗಂಗಾ ಮಠದಲ್ಲಿರುವ ಶ್ರೀ ಶ್ರೀ ಗುರುಗಳು, ಆಡಳಿತಾಧಿಕಾರಿಗಳು, ಸಿಬ್ಬಂಧಿ ವರ್ಗ, ಫಲಾನುಭವಿಗಳು ಹಾಗು ತಜ್ಞರ ಜೊತೆ ಸಂವಾದದ ಮೂಲಕವು, ದ್ವಿತೀಯಮಾಹಿತಿಯನ್ನು ಆಕರ ಗ್ರಂಥಗಳು, ಸಂಶೋಧನಾ ಕೃತಿಗಳು, ಕೈಪಿಡಿಗಳು, ನಿಯತಕಾಲಿಕೆಗಳು ಮತ್ತು ಸಂಶೋಧನಾ ವರದಿಗಳ ಆಧಾರದಮೇಲೆ ಸಂಗ್ರಹಿಸಲಾಗಿದೆ.

ಸಿದ್ಧಗಂಗಾ ಮಠವು 13ನೇ ಶತಮಾನದಿಂದ ನಿರಂತರವಾಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದರೂ ಡಾ. ಶ್ರೀ ಶ್ರೀ ಶಿವಕುಮಾರಸ್ವಾಮೀಜೀಯವರ ಕಾಲದಲ್ಲಿ ಅತಿ ಶೀಘ್ರವಾಗಿ ವಿಸ್ತಾರವಾಗಿ ಬೆಳೆದಿದೆ. ಶ್ರೀ ಸ್ವಾಮೀಜೀಯವರು 1930ರಲ್ಲಿ ಪೀಠಕ್ಕೆ ಬಂದರು. ಈಗ ಇವರಿಗೆ 108 ಸಂವತ್ಸರಗಳ ಯೌವನ.

ಶಿಕ್ಷಣ ಬೇಡಿಬಂದವರಿಗೆ ಉಚಿತ ಶಿಕ್ಷಣ. ಆಹಾರ ಅರಸಿಬಂದವರಿಗೆ ಸದಾ ಭೋಜನ, ಸಾಂತ್ವನ ಬಯಸಿ ಬಂದವರಿಗೆ ಯಾವಾಗಲೂ ತೆರೆದ ಬಾಗಿಲು, ನ್ಯಾಯ ಅರಸಿ ಬಂದವರಿಗೆ ನಿಶುಲ್ಕ ನ್ಯಾಯ, ದೂರುನೀಡಿದವರು ದೂರಾಗುವ ಬದಲು ಬಂಧುಗಳಾಗುವಂಥ ವಾತಾವರಣ ನಿರ್ಮಿಸಿ ಅಶ್ರದ್ಧಾವಂತರಿಗೂ ಆಶ್ರಯ ನೀಡಿ ಕ್ರಮೇಣ ಅವರಲ್ಲಿ ಶ್ರದ್ಧಾ-ಭಕ್ತಿ ಉಂಟುಮಾಡುವ ಚುಂಬಕಶಕ್ತಿ ಶ್ರೀಗಳಿಗಿದೆ. ದೇಶ- ಕಾಲಗಳಿಗನುಗುಣವಾಗಿ ಆಸರೆ, ಆಶ್ರಯ, ಅಭಯ, ನೀಡಲಾಗುವುದು. ಸಮಾಜದ ಎಲ್ಲಾ ವರ್ಗದವರು ಮಾರ್ಗದರ್ಶನಕ್ಕಾಗಿ ಇಲ್ಲಿಗೆ ಬರುತ್ತಾರೆ. ಶ್ರೀ ಸಾಮನ್ಯರು, ಕೀಡಾಪಟುಗಳು. ರಾಜಕಾರಣಿಗಳು, ಸಿನಿಮಾ ನಟರು,,,,,,, ಹೀಗೆ ಬಾಯಾರಿ ಬಂದವರೆಲ್ಲರಿಗೂ ಇದು ಸಿದ್ಧವಾಗಿರುವ ಗಂಗೆಯನ್ನು ನೀಡುವ ತಾಣವಾಗಿದೆ.

ಶಿಕ್ಷಣ ಕೇಂದ್ರಗಳು:

ಶೂನ್ಯ ಸಿಂಹಾಸನದ ಪೀಠಾಧಿಪತಿಗಳಾಗಿದ್ದ ಶ್ರೀಶ್ರೀ ಉದ್ದಾನ ಸ್ವಾಮಿಗಳಿಂದ ಇಲ್ಲಿನವರೆಗಿನ ಎಲ್ಲಾ ಶ್ರೀಗಳೂ ಶಿಕ್ಷಣಕ್ಕೆ ಮಹತ್ವ ನೀಡಿದ್ದರೂ ಡಾ. ಶ್ರೀ ಶ್ರೀ ಶಿವಕುಮಾರಸ್ವಾಮೀಜೀಯವರ ಕಾಲದಲ್ಲಿ ಶಿಕ್ಷಣ ಕೇಂದ್ರಗಳು ವಿಸ್ತಾರವಾಗಿ ಬೆಳೆದಿವೆ. ಪ್ರಸ್ತುತ 132 ಶಿಕ್ಷಣ ಸಂಸ್ಥೆಗಳು ಕರ್ನಾಟಕದ 8 ಜಿಲ್ಲೆಯಲ್ಲಿ ಅದರಲ್ಲೂ 90% ಸಂಸ್ಥೆಗಳು ಗ್ರಾಮೀಣ ಪ್ರದೇಶಗಳಲ್ಲಿವೆ.

ಪೂರ್ವ-ಪ್ರಾಥಮಿಕಶಾಲೆ----- 9
ಮಾಧ್ಯಮಿಕ ಶಾಲೆ-------- 9
ಪ್ರೌಢಶಾಲೆ------------ 55
ಪಧವಿಪೂರ್ವ ಕಾಲೇಜು— 13
ಡಿ ಎಡ್ ಕಾಲೇಜು------- 4
ಸಂಸ್ಕೃತ ಕಾಲೇಜು--------- 1
ಸಂಸ್ಕೃತ ಶಾಲೆ---------- 22
ಕನ್ನಡ ಪಂಡಿತ್ ತರಬೇತಿ ಶಾಲೆ- 1
ಪ್ರಥಮ ದರ್ಜೆ ಕಲೇಜು-------- 4

International Journal of Academic Research
ISSN: 2348-7666; Vol.3, Issue-3(2), March, 2016
Impact Factor: 3.075; Email: drtvramana@yahoo.co.in

ಪಾಲಿಟೆಕ್ನಿಕ್ ಕಾಲೇಜು--------- 1
ಫಾರ್ಮಸಿ ಕಾಲೇಜು--------- 1
ನರ್ಸಿಂಗ್ ಕಾಲೇಜು--------- 1
ಕಾಮರ್ಸ್ ಕಾಲೇಜು--------- 1
ಅಂಧರ ಶಾಲೆ----------- 1
ಐಟಿಐ ಕಾಲೇಜು---------- 1
ಅಂಗವಿಕಲರ ತರಬೇತಿ ಕೇಂದ್ರ--- 1
ಬ್ಯುಸನೆಸ್ ಮ್ಯಾನೇಜ್‌ಮೆಂಟ್ ಕೇಂದ್ರ- 1
ಬಿಎಡ್ ಕಾಲೇಜು------------- 1
ದೈಹಿಕ ತರಬೇತಿ ಕಾಲೇಜು-------- 1
ಸಿದ್ಧಗಂಗ ತಾಂತ್ರಿಕ ಸಂಸ್ಥೆ--------- 1

ಒಟ್ಟು---------------------132

ಈ 132 ಶಿಕ್ಷಣ ಸಂಸ್ಥೆಗಳಲ್ಲಿ 45,000 ವಿದ್ಯಾರ್ಥಿಗಳಿಗೆ (30,000 ಗಂಡು,15,000ಹೆಣ್ಣು) 1,300ಶಿಕ್ಷಕರು 700 ಸಹಕಾರಿಗಳು ಶಿಕ್ಷಣ ನೀಡುತ್ತಿದ್ದಾರೆ.

2010–11ರ ಶೈಕ್ಷಣಿಕ ಸಾಲಿನಲ್ಲಿ 55 ಶಾಲೆಗಳಲ್ಲಿನ 5372ವಿದ್ಯಾರ್ಥಿಗಳು 10ನೇ ತರಗತಿ ಪರೀಕ್ಷೆ ತೆಗೆದುಕೊಂಡು 82.5% ಫಲಿತಾಂಶ ಪಡೆದಿದ್ದಾರೆ. 13 ಕಾಲೇಜುಗಳಲ್ಲಿ ದ್ವಿತಿಯ ಪಿಯುಸಿ ಪರೀಕ್ಷೆಯನ್ನು ತೆಗೆದುಕೊಂಡ 2455 ವಿದ್ಯಾರ್ಥಿಗಳು 65.25% ಫಲಿತಾಂಶಗಳಿಸಿದ್ದಾರೆ.

ಶ್ರೀ ಕ್ಷೇತ್ರದಲ್ಲಿ 10ನೇ ತರಗತಿಯ ಪರೀಕ್ಷೆ ತೆಗೆದುಕೊಂಡವರು–1312 ಇದರಲ್ಲಿ 62 ವಿದ್ಯಾರ್ಥಿಗಳು 85%ಗಿಂತ ಅಧಿಕ ಅಂಕಗಳಿಸಿದ್ದಾರೆ. 642 ವಿದ್ಯಾರ್ಥಿಗಳು ಪ್ರಥಮ ದರ್ಜೆ ಪಡೆದರೆ, 218 ವಿದ್ಯಾರ್ಥಿಗಳು ದ್ವಿತಿಯ ದರ್ಜೆಗಳಿಸಿದ್ದಾರೆ. 247 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಕೇವಲ 43 ವಿದ್ಯಾರ್ಥಿಗಳು ನಪಾಸಾಗಿದ್ದಾರೆ. ಈ ಉತ್ತಮ ಫಲಿತಾಂಶಕ್ಕೆ (96.53) ಇಲ್ಲಿನ ಆಧ್ಯಾತ್ಮಿಕ ಪರಿಸರ ಕಾರಣವೆಂದು ಇಲ್ಲಿನ ಶಿಕ್ಷಕರು ತಿಳಿಸುತ್ತಾರೆ.

ಇಲ್ಲಿನ ಸಂಸ್ಕೃತ ಶಾಲೆಯು 1917ರಲ್ಲಿ ಅರಂಭಿಸಲ್ಪಟ್ಟಿತು. ಇಲ್ಲಿ 9,000 ವಿದ್ಯಾರ್ಥಿಗಳು ವಿವಿಧ ಶ್ರೇಣಿಗಳಲ್ಲಿ ಅಧ್ಯಯನ ನಡೆಸುತ್ತಿದ್ದಾರೆ. ಇಲ್ಲಿ ಕಲಿತ ನೂರಾರು ವಿದ್ವಾಸರು ಸಂಸ್ಕೃತ ಪ್ರಚಾರ–ಪ್ರಸಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆನೇಕ ವಿರಳ ಗ್ರಂಥಗಳನ್ನು ಹೊಂದಿರುವ ಗ್ರಂಥಾಲಯವು ಈಗ ಸಂಶೋಧಕರ ದಾಹ ತಣಿಸುತ್ತಿದೆ. 1982ರಲ್ಲಿ ಇದು ವಜ್ರಮಹೋತ್ಸವವನ್ನು ಗುರುಗಳೊಂದಿಗೆ ಆಚರಿಸಿಕೊಂಡಿದೆ.

1963ರಲ್ಲಿ ಚಿಕ್ಕದಾಗಿ ಪ್ರಾರಂಭವಾದ ಸಿದ್ಧಗಂಗಾ ತಾಂತ್ರಿಕ ಕಾಲೇಜು ಈಗ 65 ಎಕರೆಗಳಲ್ಲಿ ಪಸರಿಕೊಂಡಿದೆ. ದೇಶ–ವಿದೇಶಗಳ 4,850 ವಿದ್ಯಾರ್ಥಿಗಳು, ತಂತ್ರಜ್ಞಾನದ 12 ಶಾಖೆಗಳಲ್ಲಿ (ಸಿವಿಲ್, ಮೈಕಾನಿಕಲ್, ಮಾಹಿತಿ ತಂತ್ರಜ್ಞಾನ, ಮ್ಯಾನೇಜ್‌ಮೆಂಟ್,,,,,,) ಕಲಿಯುತ್ತಿದ್ದಾರೆ. ಇದರ ಜೊತೆಗೆ ಸ್ನಾತಕೋತ್ತರ ತಂತ್ರಜ್ಞಾನದ 13ಶಾಖೆಗಳಿವೆ. ಈ ಶಾಖೆಗಳಲ್ಲಿ ಪಿಎಚ್ ಡಿ ಮಾಡಲೂ ಅವಕಾಶವಿದೆ. ಇದೆಲ್ಲದರ ಸದುಪಯೋಗವಾಗುವಂತೆ ಗುರುಗಳು ಮಾರ್ಗದರ್ಶನ ಮಾಡುತ್ತಿರುತ್ತಾರೆ.

ಅನ್ನ ದಾಸೋಹ

ಪ್ರತಿದಿನ ಮಠದಲ್ಲಿ 9000 ವಿದ್ಯಾರ್ಥಿಗಳು ಸುಮಾರು 3000 ಭಕ್ತರು ಪ್ರಸಾದವನ್ನು ಮೂರುಹೊತ್ತೂ ಸ್ವೀಕರಿಸುತ್ತಾರೆ. ರಜಾಕಾಲದಲ್ಲಿ ಪ್ರವಾಸಿಗರ ಸಂಖ್ಯೆ ಪ್ರತಿದಿನ 6000ಕ್ಕೂ ಹೆಚ್ಚಾಗುತ್ತದೆ. ಇದನ್ನು ಭೋಜನ ಶಾಲೆಯಲ್ಲಿನ ದಾಖಲೆಯಿಂದ ಅರಿಯಬಹುದಾಗಿದೆ.

ಅಕ್ಕ–ಪಕ್ಕ ಎಲ್ಲೇ ಕಾರ್ಯಕ್ರಮ ನಡೆದರೂ ಜನರು ಊಟಕ್ಕೆ ಇಲ್ಲಿಗೆ ಬರುತ್ತಾರೆ. ರಾಜಕೀಯ ಸಮಾವೇಷಗಳಾದಾಗ ಸಾವಿರಾರು ಜನರು ಒಟ್ಟಿಗೆ ಬರುತ್ತಾರೆ. ಹೀಗೆ ಬಂದವರಿಗೆ ಎಂದೂ ನಿರಾಸೆಯಾಗಿಲ್ಲ. ಏಕೆಂದರೆ ನೂರಾರು ವರ್ಷಗಳಹಿಂದೆ ಹಚ್ಚಿದ ಒಲೆ ಆರದಿರಲಿ ಎಂದು ಶ್ರೀ ಅಟವೀ ಸ್ವಾಮೀಜಿಜಿಯವರು ಶ್ರೀ ಸಿದ್ಧೇಶ್ವರರಲ್ಲಿ ಮಾಡಿದ ಪ್ರಾರ್ಥನೆ. ಹಾಗೂ ಶ್ರೀ ಸ್ವಾಮೀಜೀಯವರ ಕಾಯಕ–ತಪಸ್ಸು.

ಇಲ್ಲಿ ಒಂದು ದಿನಕ್ಕೆ 9000 ವಿದ್ಯಾರ್ಥಿಗಳಿಗೆ ಬಳಸುವ ಆಹಾರ–ಪದಾರ್ಥ– ಅಂದಾಜು ಬೆಲೆ

| | | |
|---|---|---|
| ಅಕ್ಕಿ– | 30 ಕ್ವಿಂಟಾಲ್ | 1,20,000ರೂಪಾಯಿಗಳು |
| ರಾಗಿ ಹಿಟಟು– | 15 ಕ್ವಿಂಟಾಲ್ | 30,000 |
| ತೊಗರಿ ಬೇಳೆ– | 03 ಕ್ವಿಂಟಾಲ್ | 30,000 |
| ತರಕಾರಿ– | 04 ಕ್ವಿಂಟಾಲ್ | 8,000 |
| ಈರುಳ್ಳಿ– | 03 ಕ್ವಿಂಟಾಲ್ | 6,000 |
| ಉಪ್ಪಿಟ್ಟು ರವೆ– | 05 ಕ್ವಿಂಟಾಲ್ | 17,500 |
| ಸಾಂಬಾರು ಪುಡಿ– | 01 ಕ್ವಿಂಟಾಲ್ | 8,000 |
| ಹುಣಸೇ ಹಣ್ಣು– | 60 ಕೆಜಿ | 4,500 |
| ಹಸಿ ಮಣಸಿನ ಕಾಯಿ– | 25 ಕೆಜಿ | 625 |
| ಕಡಲೆಕಾಯಿ ಎಣ್ಣೆ– | 100 ಕೆಜಿ | 1,00,000 |
| ಹಾಲು ಮಜ್ಜಿಗೆಗಾಗಿ– | 300 ಲೀಟರ್ | 10,500 |
| ತೆಂಗಿನಕಾಯಿ– | 200 | 2,000 |
| ಉರುವಲು ಇತ್ಯಾದಿ | | 5,875 |
| ಒಂದು ದಿನದ ಅಂದಾಜು **ಖರ್ಚು** | | **6,50,000** |

ವಿಷೇಶ ಶಾಲೆಗಳು

ಧೃಷ್ಟಿ ದೋಷವುಳ್ಳ 85 ವಿದ್ಯಾರ್ಥಿಗಳು 1–10ನೇ ತರಗತಿಯವರೆಗಿನ ವಿಷೇಶ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಹಾಗೆ ವಾಕ್ ಮತ್ತು ಶ್ರವಣ ದೋಷವುಳ್ಳ 75 ಮಕ್ಕಳು 1–10ನೇ ತರಗತಿಯವರೆಗಿನ ವಿಶೇಷ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

ಕಲಾ–ಕೌಶಲಗಳ ಕಲಿಕೆ

ಶಾಲಾಶಿಕ್ಷಣದ ಜೊತೆಜೊತೆಗೆ ಸಂಗೀತ, ನಾಟ್ಯ, ಭಾಷಣಕಲೆ, ಕ್ವಿಜ್ ಇತ್ಯಾದಿ ಕಲಾ–ಕೌಶಲಗಳನ್ನು ಕಲಿಯುತ್ತಾರೆ. ಇಲ್ಲಿನ ಅಂತ್ಯಾಕ್ಷರಿಯು ಸಂಸ್ಕೃತದಲ್ಲಿನ ಶ್ಲೋಕಗಳನ್ನು ಕಂಠಪಾಠ ಮಾಡಲು ಸಹಕಾರಿಯಾಗುತ್ತದೆಂದು ವಿದ್ಯಾರ್ಥಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಸಿದ್ಧಲಿಂಗ ನಾಟಕ ಮಂಡಳಿ ಮಕ್ಕಳಲ್ಲಿನ ಹಾಗು ಸಿಬ್ಬಂದಿವರ್ಗದವರ ಕಲಾ ದಾಹವನ್ನಡಗಿಸಲು ಪ್ರಾರಂಭವಾಯಿತು. ಇದು ಈಗ ಪೂರ್ಣ ಪ್ರಮಾಣದಲ್ಲಿ ಬೆಳೆದಿದ್ದು ಕ್ಷೇತ್ರದಲ್ಲಿ ಹಾಗು ಇತರೆಡೆಯಲ್ಲಿ ಯಶಸ್ವೀ ಪ್ರದರ್ಶನಗಳನ್ನು ನೀಡುತ್ತಿದೆ. ಜನರಲ್ಲಿ ಅನೌಪಚಾರಿಕ ಶಿಕ್ಷಣ ನೀಡುವಲ್ಲಿ ಇದು ಸಫಲವಾಗಿದೆ. ಶರಣ ಶ್ರೀ ಬಸವೇಶ್ವರರ 1000 ಪ್ರದರ್ಶನ ನೀಡಿದೆ. ಇದರ ಫಲವಾಗಿ ಅಸ್ಪೃಶ್ಯತೆ, ಮೂಢನಂಬಿಕೆ ಕಡಿಮೆಯಾಗುತ್ತಿದೆ. ಶ್ರಮಕ್ಕೆ ಬೆಲೆ ಬಂದಿದೆ.

ಸಾಮೂಹಿಕ ಪ್ರಾರ್ಥನೆ

ಇಲ್ಲಿಯ ವಿಷೇಶಗಳಲ್ಲಿ ಸಾಮೂಹಿಕ ಪ್ರಾರ್ಥನೆಯೋ ಒಂದು. 9,000 ವಿದ್ಯಾರ್ಥಿಗಳು ಪ್ರತಿದಿನ 6.30ಕ್ಕೆ ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುವುದು ಮಾಡುವವರ ಹಾಗು ನೋಡುಗರ ಕಣ್ಣು–ಕಿವಿ–ಮನಸ್ಸಿಗೆ ಮುದನೀಡುವುದರ ಜೊತೆಗೆ ಸಂಸ್ಕಾರವನ್ನೂ ನೀಡುತ್ತದೆ. ಶ್ರೀ ಶ್ರೀಗಳ ಉಪನ್ಯಾಸ ಮನವನ್ನರಳಿಸುತ್ತದೆ.

ಇಲ್ಲಿರುವರೆಲ್ಲರೂ ಒಂದಿಲ್ಲೊಂದು ಶ್ರಮದಾನದಲ್ಲಿ ನಿರತರಾಗಿರುತ್ತಾರೆ. ಪ್ರತಿದಿನವೂ ವಸತಿ ಸ್ವಚ್ಛತೆ, ಕೃಷಿ, ಕಟ್ಟಡ ಕಟ್ಟುವುದು, ಪಾಕಶಾಲೆಯಲ್ಲಿ, ಭೋಜನ ಶಾಲೆಯಲ್ಲಿ ತಮ್ಮ ಪಾಲಿಗೆ ಬರುವ ಶ್ರಮಸೇವೆಯಲ್ಲಿ ಸಹರ್ಷದಿಂದ ಭಾಗವಹಿಸುತ್ತಾರೆ, ಸಿಬ್ಬಂದಿವರ್ಗದವರು ಸಹ ಇಲ್ಲಿ ಸೇವಾಕಾರ್ಯ ಮಾಡುತ್ತಾರೆ. ಇದಕ್ಕೆ ಆದರ್ಶ ಶ್ರೀಗಳಾಗಿದ್ದಾರೆ. ಇದರಿಂದ ಮಕ್ಕಳಿಗೆ ಶ್ರಮಗೌರವದ ಬೆಲೆ ಅರಿವಾಗಿದೆ.

ಜಾತ್ರೆ

ಪ್ರತಿವರ್ಷ ಶಿವರಾತ್ರಿ ಸಮಯದಲ್ಲಿ 15 ದಿನದ ಜಾತ್ರೆ ನಡೆಯುತ್ತದ್ದೆ. ಲಕ್ಷಾಂತರ ಜನ ಇದರಲ್ಲಿ ಭಾಗವಹಿಸುತ್ತಾರೆ. ಇದು ಜನರಿಗೆ ಮನರಂಜನೆಯ ಜೊತೆಗೆ ಶಿಕ್ಷಣವನ್ನೂ ನೀಡುತ್ತದೆ. ಕೃಷಿ ಮೇಳ–ಯಂತ್ರಮೇಳಗಳು ಜನರ ಜ್ಞಾನವನ್ನು ಹೆಚ್ಚಿಸುತ್ತಿವೆ. ಈ ಸಮಯದಲ್ಲಿ ಶ್ರೀ ಸ್ವಾಮೀಜೀಯವರು ನೀಡುವ ಪ್ರವಚನ ಪರಾಪರಗಳೆರಡರ ದರ್ಶನ ಮಾಡಿಸುತ್ತದೆ.

ಮುದ್ರಣ

ಸಂಸ್ಕಾರ–ಜನಜಾಗರಣಕ್ಕಾಗಿ ಸಿದ್ಧಗಂಗ ಮಾಸಿಕ ಹಾಗು ಮಹಾಪುರುಷರ ವಚನ–ಜೀವನ ಚರಿತ್ರೆ–ಸಂದೇಶಗಳನ್ನು ಮಠದವತಿಯಿಂದ ಮುದ್ರಿಸಲಾಗುತ್ತದೆ. ಇಲ್ಲಿಯವರೆಗೆ 118 ಗ್ರಂಥಗಳನ್ನು ಮುದ್ರಿಸಿದೆ. ಇದಕ್ಕಾಗಿಯೆ ಒಂದು ಸುಸಜ್ಜಿತ ಮುದ್ರಣಾಲಯವನ್ನು ಸ್ಥಾಪಿಸಲಾಗಿದೆ.

ಪೂರ್ವಛಾತ್ರ ಪರಿಷದ್

ಇಲ್ಲಿ ಕಲಿತ ವಿದ್ಯಾರ್ಥಿಗಳು ವರ್ಷದಲ್ಲಿ ಒಂದುಬಾರಿ ಸೇರಿ ತಮ್ಮ ಹಳೆಗೆಳೆಯರೊಂದಿಗೆ ಸಿಹಿನೆನಪುಗಳನ್ನು ನೆನೆಯುತ್ತಾ ಮಠದ ಮುಂದಿನ ಯೋಜನೆಗಳನ್ನು ರೂಪಿಸುತ್ತಾರೆ. ನಂತರ ಸಾಮನ್ಯ ಸಭೆಯಲ್ಲಿ ಒಪ್ಪಿಗೆ ಪಡೆದು ಶ್ರೀಗಳ ಆದೇಶದಂತೆ ಕಾರ್ಯನಿರ್ವಹಿಸಿ ಲೆಕ್ಕ–ಪತ್ರಗಳನ್ನು ಒಪ್ಪಿಸುತ್ತಾರೆ. ಮಠದ ಎಲ್ಲಾ ಕಾರ್ಯಕ್ರಮಗಳಲ್ಲಿ ಇವರ ಪಾತ್ರ ಗಣನೀಯವಾಗಿರುತ್ತದೆ. ಈಗ ಬರುತ್ತಿರುವ ಮಾಸಿಕ ಹಾಗೂ ಮುದ್ರಣದ ಎಲ್ಲಾಕಾರ್ಯಗಳನ್ನು ಈ ಹಿಂದಿನ ವಿದ್ಯಾರ್ಥಿಗಳ ಸಂಘ ಮಾಡುತ್ತಿದೆ.

ಇದರ ಜೊತೆಗೆ ಪ್ರತಿದಿನವೂ ಒಂದಿಲ್ಲೊಂದು ಕಾರ್ಯಕ್ರಮ ಶ್ರೀ ಕ್ಷೇತ್ರದಲ್ಲಿ ನಡೆಯುತ್ತದೆ.

ಹೀಗೆ ಸಿದ್ಧಗಂಗಾ ಮಠವು ಶ್ರೀ ಸ್ವಾಮೀಜೀಯವರ ನೇತೃತ್ವದಲ್ಲಿ ತ್ರಿವಿಧದಾಸೋಹವನ್ನು ಸಮಾಜಕ್ಕೆ ನೀಡುತ್ತಿದೆ. ಇದರಿಂದಾಗಿ ಇಲ್ಲಿನ ಭಕ್ತರು, ವಿದ್ಯಾರ್ಥಿಗಳು, ತಮ್ಮ ದೈನಂದಿನ ಜೀವನದಲ್ಲಿ ಇದನ್ನು ಅಳವಡಿಸಿಕೊಂಡಿದ್ದಾರೆ. ಹಾಗಾಗಿ ಇಲ್ಲಿ ಓದಿದ ವಿದ್ಯಾರ್ಥಿಗಳು ಇದರ ಏಳಿಗೆಗೆ ವರ್ಷವಿಡಿ ದುಡಿಯತ್ತಿದ್ದಾರೆ. ಯಾವುದಕ್ಕೂ ಕೊರತೆಯಾಗದಂತೆ ಭಕ್ತರು ನೋಡಿಕೊಳ್ಳುತ್ತಿದ್ದಾರೆ. ಫಲ ಪಡೆದ ಫಲಾನುಭವಿಗಳು ತಮ್ಮ ಫಲಿದದಂಶವನ್ನು ಸಮಾಜಕ್ಕೆ ಧಾರೆ ಎರೆಯುತ್ತಿದ್ದಾರೆ. ಆದುದರಿಂದ

ಈ ಪಾರಂಪರಿಕ ಜ್ಞಾನದ ಸರಿಯಾದ ಅಧ್ಯಯನಮಾಡಿ, ಹದವರಿತು ಇದನ್ನು ಶಿಕ್ಷಣದಲ್ಲಿ ಬಳಸಿದರೆ ಸಮಾಜದ ವಿಕಸನವಾಗುತ್ತದೆ.

ಸಾಹಿತ್ಯಾಧ್ಯಯನ:–

1. ಡಾ. ಪದ್ಮನಾಭ ವ್ಮರಾತೆ– ಸಮೃದ್ಧ ರಾಷ್ಟ್ರ : ಸಮಗ್ರ ಧೃಷ್ಟಿ,
ಪ್ರಕಾಶಕರು: ಶ್ರೀದುರ್ಗ ಸಂಸ್ಕೃತ ಸ್ನಾತಕೊತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕಳಸ. 2009

2. ಜ್ಞಾನ ದಾಸೋಹ ಮಾಲೆ–20
ಶ್ರೀ ಸಿದ್ಧಗಂಗಾ ಕ್ಷೇತ್ರ
ಡಾ. ಎಂ ಜಿ ನಾಗರಾಜ್
ಶ್ರೀ ಸಿದ್ಧಗಂಗಾ ಪ್ರಕಾಶನ, ಶ್ರೀ ಸಿದ್ಧಗಂಗಾಮಠ,
ತುಮಕೂರು
2008

3. ವಜ್ರಮಹೋತ್ಸವ–ಸುರಗಂಗಾ–1982
ಮುಖ್ಯ ಸಂಪಾದಕರು– ಎಸ್ ಪಿ ಶಿವಶಂಕರ
ಶ್ರೀ ಸಿದ್ಧಗಂಗಾ ಪ್ರಕಾಶನ, ಶ್ರೀ ಸಿದ್ಧಗಂಗಾಮಠ,
ತುಮಕೂರು
1982

4. ನಿರಂಜನ ಶ್ರೀ
ಸಂಪಾದಕರು– ಹೆಚ್ ವಿ ವೀರಭದ್ರಯ್ಯ
ಹೆಚ್ ಎಸ್ ಸಿದ್ಧಗಂಗಪ್ಪ
ಎಂ ರೇಣುಕಾರ್ಯ
ಶ್ರೀ ಸಿದ್ಧಗಂಗಾ ಪ್ರಕಾಶನ, ಶ್ರೀ ಸಿದ್ಧಗಂಗಾಮಠ,
ತುಮಕೂರು
2011

5. ಮಹಾ ತಪಸ್ವೀ
ಸಂಪಾದಕ ಸಮಿತಿ ಅಧ್ಯಕ್ಷರು– ಜಿ ಎಸ್ ಶಿವರುದ್ರಪ್ಪ
ಗುರುವಚಿದನ ಮಹೋತ್ಸವ ಸಮಿತಿ,
13/1 ಬಸವ ಸದನ,
ವಿಶ್ವನಾಥ ರಾವ್ ರಸ್ತೆ, ಮಾಧವ ನಗರ,
ಬೆಂಗಳೂರು
2000

6. ಸಿದ್ಧಗಂಗಾ ಶ್ರೀ (ಕ್ಷೇತ್ರ ಶ್ರೀ ವಿಭಾಗ)
ಸಂಪಾದಕರು ಚನ್ನಪ್ಪ ಎರೇಸೀಮೆ
ಓ ಆರ್ ಮಹಾದೇವಚ್ಚು
ಹಳೆ ವಿದ್ಯಾರ್ಥಿ ಸಂಘ,
ಶ್ರೀ ಸಿದ್ಧಗಂಗಾ ಕ್ಷೇತ್ರ.
ತುಮಕೂರು.
1980

7. Roleof Religious Institutions inthe Promotation of Karnataka.

Ph.D. Thesis, Dept. of Social Work. Karnataka University, Dharwad,

Bidarakoppa -1972. Acc. No.1172.

8. A comparative Study of two Virasaiva Monusteries,

Ph.D. Thesis, Karnataka University, Dharwad,

Sadashivaiah H.M. -1967.

9. Sree Siddaganga Gurukula the abode of charity Sree Math

By; Association of Old boys and well-wishers of sree siddaganga gurukul (revised;2012)

9. Annual Report and Accounts for the year 2010-11

(General Body Meeting)

Sree Siddaganga Education Society(Regd.)

Sree Siddaganga Math

10. www.siddaganga math